ಅಧ್ಯಕ್ಷರು.—ಹೀಗೆ ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ನೀವುಗಳು ಈ ರೀತಿಯಾಗಿ ಕಾರ್ಯಕಲಾಪ ನಡೆಯುವಾಗ ಇಂಟರ್‌ಫಿಯರ್ ಮಾಡಿದರೆ ಅನಿವಾರ್ಯವಾಗಿ ಸೂಕ್ತ ಕ್ರಮವನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನನ್ನ ಹತ್ತಿರ ಸಂಬಂಧಪಟ್ಟ ವಿಷಯದ ಬಗ್ಗೆ ವಿವರಗಳು ಇವೆ. ದಯವಿಟ್ಟು ತನಿಖೆ ಮಾಡಿಸಿ.....

ಅಧ್ಯಕ್ಷರು.—ಅದನ್ನು ನೀವು ಅರ್ಧಘಂಟೆ ಕಾಲಾವಧಿಯ ಚರ್ಚೆಗೆ ಕಳುಹಿಸಿಕೊಡಿ. ಅವಕಾಶ ಮಾಡಿಕೊಡುತ್ತೇನೆ.

ರಾಜ್ಯದಲ್ಲಿ ಅಂಗನವಾಡಿ ಶಿಶು ವಿಹಾರಗಳನ್ನು ಪ್ರಾರಂಭಿಸುವ ಬಗ್ಗೆ

೨೯೭೧ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ತಾಲ್ಲೂಕಿನಲ್ಲಿ ಅಂಗನವಾಡಿ ಶಿಶು ವಿಹಾರಗಳನ್ನು ಪ್ರಾರಂಭಿಸಲಾಗಿದೆ?

ಆ) ತರೀಕೆರೆ ತಾಲ್ಲೂಕಿನಲ್ಲಿ ಅಂಗನವಾಡಿ ಶಿಶು ವಿಹಾರಗಳನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಂಡಿರುವರೆ?

ಇ) ಯಾವ ಆಧಾರಗಳ ಮೇಲೆ ಅಂಗನವಾಡಿ ಶಿಶು ವಿಹಾರಗಳನ್ನು ಪ್ರಾರಂಭಿಸಲಾಗಿದೆ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

ಅ) ೮೮ ತಾಲ್ಲೂಕುಗಳಲ್ಲಿ ಪ್ರಾರಂಭಿಸಲಾಗಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಈ ಕೆಳಕಂಡ ಆಧಾರಗಳ ಮೇಲೆ ಪ್ರಾರಂಭಿಸಲಾಗುತ್ತಿದೆ.-

೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಸಂಖ್ಯೆ ಶೇ ೨೦೦೦ ಕ್ಕಿಂತ ಅಧಿಕವಿರುವ ಪ್ರದೇಶಗಳಲ್ಲಿ.

೨) ಕ್ಷಾಮ ಪೀಡಿತ ಪ್ರದೇಶ (ಡಿ.ಪಿ.ಪಿ.)

೩) ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಪ್ರದೇಶ (ಐ.ಟಿ.ಡಿ.ಪಿ.)

೪) ಪರಿಶಿಷ್ಟ ಜಾತಿಗೆ ಮೀಸಲಾದ ವಿಧಾನಸಭಾ ಕ್ಷೇತ್ರವನ್ನಿರುವ ತಾಲ್ಲೂಕು ಹಾಗೂ ಹಿಂದುಳಿದ ವರ್ಗಗಳಿರುವ ತಾಲ್ಲೂಕುಗಳಿಗೆ ಆದ್ಯತೆಯ ಮೇಲೆ ನೀಡಲಾಗುತ್ತಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ರಾಜ್ಯದಲ್ಲಿ ೮೮ ತಾಲ್ಲೂಕುಗಳಲ್ಲಿ ಅಂಗನವಾಡಿ ಶಿಶುವಿಹಾರಗಳನ್ನು ತೆರೆದು ಸ್ವಾಗತಾರ್ಹ ಕಾರ್ಯಕ್ರಮವನ್ನು ಮಾಡಿದ್ದೀರಿ ನಮ್ಮ ಕ್ಷೇತ್ರದಲ್ಲಿ ಅಂಗನವಾಡಿ ಶಿಶು ವಿಹಾರವನ್ನು ತೆರೆಯುವ ಬಗ್ಗೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ ಹೀಗೆ ಅಂಗನವಾಡಿಗಳನ್ನು ತೆರೆಯುವಾಗ ಕೇಂದ್ರ ಸರಕಾರದ ಗೈಡ್‌ಲೈನ್ಸ್‌ಗೆ ಅನುಸಾರವಾಗಿ ತೆರೆಯುತ್ತೀರಾ? ಹಾಗೆಯೇ ಸ್ಪೆಷಲ್ ನ್ಯೂಟ್ರೀಷನ್ ಪ್ರೋಗ್ರಾಂ ಅನ್ನು ನಮ್ಮ ತಾಲ್ಲೂಕಿನಲ್ಲಿ ತೆಗೆದುಕೊಳ್ಳುತ್ತೀರಾ ಎಂಬ ಬಗ್ಗೆ ಕೂಡ ಮಾನ್ಯ ಸಚಿವರು ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಈ ಯೋಜನೆ ವಿಸ್ತಾರವಾಗಿದೆ ಇದರಲ್ಲಿ ಮೂರನೇ ಒಂದರಷ್ಟು ಭಾಗವನ್ನು ಕೇಂದ್ರ ಸರಕಾರ ನೀಡುತ್ತದೆ. ಉಳಿದ ಎರಡು ಭಾಗವನ್ನು ರಾಜ್ಯ ಸರಕಾರ ಕೊಡಬೇಕಾಗುತ್ತದೆ. ೧೯೮೮-೮೯ನೇ ಸಾಲಿನಲ್ಲಿ ೧೪ ಹೊಸ ಯೋಜನೆಗಳನ್ನು ಮಂಜೂರು ಮಾಡುತ್ತೇವೆಂದು ಕೇಂದ್ರ ಸರಕಾರದವರು ಒಪ್ಪಿದ್ದರಿಂದ ಅವರ ಗೈಡ್‌ಲೈನ್ಸ್ ಪ್ರಕಾರ ೧೪

ಊರುಗಳ ಪಟ್ಟಿಯಂನ್ನು ಮಾಡಿ ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದೇವೆ. ಕೇಂದ್ರ ಸರಕಾರದವರು ಐದು ಪತ್ರವನ್ನು ಬರೆದು ನಾವು ಕಳಿಸಿದಂತಹ ೧೪ ಸ್ಥಳಗಳ ಪೈಕಿ ೭ ಸ್ಥಳಗಳನ್ನು ಬದಲಾವಣೆ ಮಾಡಿ ಇಂತಹ ಕಡೆಗಳಲ್ಲಿ ಮಾಡಬೇಕೆಂದು ಪತ್ರ ಬರೆದಿದ್ದಾರೆ ನಾವು ಕಳಿಸಿದಂತಹ ಪತ್ರದಲ್ಲಿ ತರೀಕೆರೆ, ಶಹಾಪುರ ಎರಡೂ ಸೇರಿತ್ತು. ಯಾವ ಆಧಾರದ ಮೇಲೆ ಬದಲಾವಣೆ ಮಾಡಿದ್ದಾರೆಯೋ ಗೊತ್ತಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಹೊಳಕಲ್ಲೂರು, ಬೆಂಗಳೂರು ನಗರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಕೋಲಾರದಲ್ಲಿ ಶ್ರೀನಿವಾಸ ಪುರ, ಬೆಳಗಾವಿಯಲ್ಲಿ ಚಿಕ್ಕೋಡಿ ಧಾರವಾಡದ ಬ್ಯಾಡಗಿ, ಬಿಜಾಪುರದಲ್ಲಿ ಬಿಜಾಪುರ ನಗರ, ಉತ್ತರ ಕನ್ನಡದಲ್ಲಿ ಕಾರವಾರ. ಮೈಸೂರು ಸಿಟ್ಟಿಯಲ್ಲಿ ಚಾಮರಾಜ ನಗರ, ಚಿಕ್ಕಮಗಳೂರಿನಲ್ಲಿ ತರೀಕೆರೆ, ಶಿವಮೊಗ್ಗದಲ್ಲಿ ಶಿಕಾರಿಪುರ, ಗುಲ್ಬರ್ಗದಲ್ಲಿ ಶಹಾಪುರ, ರಾಯಚೂರಿನಲ್ಲಿ ಮಾನ್ವಿ, ಬಳ್ಳಾರಿಯಲ್ಲಿ ಹೂವಿನ ಹಡಗಲಿ ತಾಲ್ಲೂಕು, ಈ ಊರುಗಳ ಪಟ್ಟಿಯನ್ನು ಮಾಡಿ ನಾವು ಬರೆದಂ ಕಳಿಸಿದ್ದೇವೆ ಅದರಲ್ಲಿ ೭ ಅನ್ನು ಬದಲಾವಣೆ ಮಾಡಿ ಎಂದು ಬರೆದಿದ್ದಾರೆ ಅದರಲ್ಲಿ ಹೊಳಕಲ್ಲೂರು, ಚಿಕ್ಕೋಡಿ, ಧಾರವಾಡದ ಬ್ಯಾಡಗಿ. ಶಿವಮೊಗ್ಗದ ಶಿಕಾರಿಪುರ. ರಾಯಚೂರಿನ ಮಾನ್ವಿ ಈ ಊರುಗಳು ಅದರಲ್ಲಿ ಸೇರಿವೆ. ಇವುಗಳನ್ನು ಬದಲಾವಣೆ ಮಾಡಬೇಕೆಂದು ಪತ್ರ ಬರೆದಿದ್ದಾರೆ. ಇದೊಂದು ಆಜ್ಞೆ ಅಲ್ಲ. ಕೇಂದ್ರ ಸರಕಾರದ ಅಧಿಕಾರಿಗಳ ಜೊತೆಯಲ್ಲಿ ನಮ್ಮ ಸರಕಾರದ ಅಧಿಕಾರಿಗಳು ಮಾತನಾಡಿದ್ದಾರೆ. ಅಧಿವೇಶನದ ನಂತರ ನಾನು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ನಾನೂ ಕೂಡ ಇದರ ಬಗ್ಗೆ ಮಾತನಾಡಿ ನಾವು ಕಳಿಸಿರತಕ್ಕಂತಹ ೧೪ ಪಟ್ಟಿ ಅವರು ಹೇಳಿರತಕ್ಕಂತಹ ೭ ಎಲ್ಲವನ್ನೂ ಸೇರಿಸಿ ಈ ೨೧ಕ್ಕೂ ಮಂಜೂರಾತಿ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ ಇದನ್ನು ಪ್ರಾರಂಭ ಮಾಡಬೇಕಾದರೆ ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಕೊಡಬೇಕಾಗುತ್ತದೆ. ಅಕ್ಟೋಬರ್ ಸಮೆಬರ್‌ನಲ್ಲಿ ಇದರ ಮಂಜೂರಾತಿ ಮಾಡುವ ನಿರ್ಧಾರವನ್ನು ತೆಗೆದುಕೊಂಡ ಮೇಲೆ ಡಿಸೆಂಬರ್‌ನಲ್ಲಿ ತರಬೇತಿಯನ್ನು ಪ್ರಾರಂಭ ಮಾಡುತ್ತೇವೆ. ಇನ್ನು ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಬಗ್ಗೆ ಹೇಳಿದ್ದೀರಿ. ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇದನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ಇಡೀ ರಾಜ್ಯದಲ್ಲಿ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರಕಾರದ ಹಣಕಾಸಿನ ಸ್ಥಿತಿಯು ಕೂಡ ಇದರಲ್ಲಿ ಅವಲಂಬಿಸಿರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು...

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ, ನಾವು ಕುಳಿತುಕೊಳ್ಳಿ. ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ನಿಮಗೆ ಕೊಟ್ಟರೆ ಬೇರೆಯವರಿಗೂ ಕೊಡಬೇಕಾಗುತ್ತದೆ. ನೀವು ಮಾತ ನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ,— ನಾವು ಜನರಿಂದ ಆರಿಸಿ ಬಂದಿರುತ್ತೇವೆ ಒಂದು ಪ್ರಶ್ನೆಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನಾವು ಇಲ್ಲಿ ಏಕೆ ಇರಬೇಕು? ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸದನದಿಂದ ಹೊರಕ್ಕೆ ಹೋದರು)

ವಿಶೇಷ ಘಟಕ ಯೋಜನೆಯ ಹಣವನ್ನು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸುವುದು.

೩೦೩೩. ಶ್ರೀ ಟಿ. ಸಿ. ಮಂಜಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವೆ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶೇಷ ಘಟಕ ಯೋಜನೆಗೆ ನಿಗದಿಪಡಿಸಿದ ಪೂರ್ಣ ಮೊತ್ತವನ್ನು ಇಲಾಖೆಗಳು ಪೂರ್ಣವಾಗಿ ಬಳಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಉತ್ತಮ ಪರಿಣಾಮಕ್ಕಾಗಿ ವಿಶೇಷ ಘಟಕ ಯೋಜನೆಯ ಪೂರ್ಣ ಮೊತ್ತವನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸುವುದನ್ನು ಸರ್ಕಾರ ಪರಿಗಣಿಸುವುದೇ ?